ಕರ್ನಾಟಕ ರಾಜ್ಯಪತ್ರ

ಅಧಿಕೃತವಾಗಿ ಪ್ರಕಟಿಸಲಾದುದು

ಸಂಪುಟ –೧೬೧	ಬೆಂಗಳೂರು, ಶುಕ್ರವಾರ, ೦೯, ಜನವರಿ, ೨೦೨೬(ಪುಷ್ಯ, ೧೯, ಶಕವರ್ಷ, ೧೯೪೭)	ಸಂಚಿಕೆ ೦೭
Volume - 161	BENGALURU, FRIDAY, 09, JANUARY, 2026(PUSHYA , 19, SHAKAVARSHA, 1947)	Issue 07

ಭಾಗ ೧

ರಾಜ್ಯ ಸರ್ಕಾರದ ಮುಖ್ಯ ಆದೇಶಗಳು ಹಾಗೂ ಸುತ್ತೋಲೆ ಮುಂತಾದ ಎಲ್ಲಾ ಇಲಾಖೆಗಳಿಗೂ ಸಂಬಂಧಿಸಿದ ಆದೇಶಗಳು

ಕರ್ನಾಟಕ ಸರ್ಕಾರದ ನಡವಳಿ

ವಿಷಯ: ರಾಜ್ಯದಲ್ಲಿ ವಿದ್ಯುತ್ ಉಪಕೇಂದ್ರಗಳನ್ನು ಸ್ಥಾಪಿಸಲು ಭೂಮಿ ಹಂಚಿಕೆ ಮಾಡುವ ಕುರಿತು

Ref: ಕೆಪಿಟಿಸಿಎಲ್ ಕಡತ ಸಂಖ್ಯೆ (ಇ-ಆಫೀಸ್): KPTCL/DP/EA1/3/2025-DP (Computer No: 1893666)

****

ಪ್ರಸ್ತಾವನೆ

ವಿದ್ಯುಚ್ಛಕ್ತಿ ಕಾಯ್ದೆ 2003 ರ ಸೆಕ್ಷನ್ 39 ರನ್ವಯ, ರಾಜ್ಯದೊಳಗಿನ ಪ್ರಸರಣ ವ್ಯವಸ್ಥೆಯನ್ನು ವಿದ್ಯುತ್ ಉತ್ಪಾದನಾ ಕೇಂದ್ರಗಳಿಂದ ವಿದ್ಯುತ್ ವಿತರಣಾ ಜಾಲಕ್ಕೆ ರವಾನಿಸಲು ಅವಶ್ಯಕ ವಿವಿಧ ವೊಲ್ಟೇಜ್ ವರ್ಗದ ವಿದ್ಯುತ್ ಉಪಕೇಂದ್ರ ಹಾಗೂ ಪ್ರಸರಣ ಮಾರ್ಗಗಳನ್ನು ಯೋಜಿಸುವುದು ಮತ್ತು ನಿರ್ವಹಿಸುವುದು ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತದ (ಕೆಪಿಟಿಸಿಎಲ್) ಜವಾಬ್ದಾರಿಯಾಗಿರುತ್ತದೆ. ಕೆಪಿಟಿಸಿಎಲ್ ರವರು ಪ್ರಸ್ತುತ 66 kV ಯಿಂದ 400 kV ವಿದ್ಯುತ್ ವರ್ಗದ ಉಪಕೇಂದ್ರಗಳನ್ನು ಸ್ಥಾಪಿಸಿ ನಿರ್ವಹಣೆಯನ್ನು ಮಾಡುತ್ತಿದ್ದು, ಮುಂಬರುವ ವರ್ಷಗಳಲ್ಲಿ 765 kV ಪ್ರಸರಣ ವ್ಯವಸ್ಥೆಯನ್ನು ಸ್ಥಾಪಿಸಲು ಯೋಜಿಸುತ್ತಿದೆ.

ಉಲ್ಲೇಖದಲ್ಲಿರುವ ಕಡತದಲ್ಲಿ ಕೆಪಿಟಿಸಿಎಲ್ ರವರು ರಾಜ್ಯದ ವಿದ್ಯುತ್ ಗ್ರಾಹಕರಿಗೆ ವಿಶ್ವಾಸಾರ್ಹ, ನಿರಂತರ ವಿದ್ಯುತ್ತನ್ನು ಸರಬರಾಜು ಮಾಡುವ ಉದ್ದೇಶದಿಂದ ಹಾಗೂ ರಾಜ್ಯದಲ್ಲಿನ ಉತ್ಪಾದನೆಯ ಸಾಮರ್ಥ್ಯವನ್ನು 2034-35ಕ್ಕೆ ದ್ವಿಗುಣಗೊಳಿಸುವ ಗುರಿಗೆ ಅನುಗುಣವಾಗಿ ಹೆಚ್ಚಿನ ಸಂಖ್ಯೆಯ ವಿದ್ಯುತ್ ಹೊಸ ಉಪಕೇಂದ್ರಗಳನ್ನು ಸ್ಥಾಪಿಸುವ ಅವಶ್ಯಕತೆಯಿರುವುದಾಗಿ ತಿಳಿಸಿರುತ್ತಾರೆ. ರಾಷ್ಟ್ರಮಟ್ಟದಲ್ಲಿಯೇ ಪವನ/ಸೌರ ವಿದ್ಯುತ್ ಉತ್ಪಾದನೆಯಲ್ಲಿ ರಾಜ್ಯವು ಮುಂಚೂಣಿಯಲ್ಲಿರುವುದರಿಂದ, ರಾಜ್ಯದ ವಿವಿಧ ಭಾಗಗಳಲ್ಲಿ ಹಲವು ಸಂಸ್ಥೆಗಳು ಸೌರ/ಪವನ ವಿದ್ಯುತ್ ಉತ್ಪಾದಿಸಲು ಮುಂದೆ ಬಂದಿದ್ದು, ಇವುಗಳಿಂದ ಉತ್ಪಾದನೆಯಾಗುವ ವಿದ್ಯುತ್ತನ್ನು ಬೇಡಿಕೆಯಿರುವೆಡೆ ಸಮರ್ಪಕವಾಗಿ ರವಾನಿಸಲು ಹೆಚ್ಚಿನ ಸಂಖ್ಯೆಯ ವಿದ್ಯುತ್ ಉಪಕೇಂದ್ರಗಳು ಮತ್ತು ಪ್ರಸರಣ ಮಾರ್ಗಗಳ ಅವಶ್ಯವಿದ್ದು, ಇದಕ್ಕೆ ಪೂರಕವಾಗಿ ಉಪಕೇಂದ್ರಗಳನ್ನು ಸ್ಥಾಪಿಸಲು ಅನುಕೂಲವಾಗುವಂತೆ ಭೂಮಿ ಹಂಚಿಕೆ ಪಡೆಯುವುದು ಅತ್ಯವಶ್ಯವಾಗಿರುವುದರಿಂದ, ವೊಲ್ಟೇಜ್ ವರ್ಗವಾರು ಉಪಕೇಂದ್ರಗಳ ಸ್ಥಾಪನೆಗೆ ಅವಶ್ಯ ಭೂಮಿಯನ್ನು ಕಂದಾಯ ಇಲಾಖೆಯಿಂದ ಹಂಚಿಕೆ ಮಾಡುವ ನಿಟ್ಟಿನಲ್ಲಿ ಸರ್ಕಾರಿ ಆದೇಶ ಹೊರಡಿಸುವಂತೆ ಕೋರಿ ಕಡತದಲ್ಲಿ ಪ್ರಸ್ತಾವನೆ ಸಲ್ಲಿಸಲಾಗಿದೆ.

ಈ ಪ್ರಸ್ತಾವನೆಯನ್ನು ಈಗಾಗಲೇ ಕಂದಾಯ ಇಲಾಖೆಯು ಪರಿಶೀಲಿಸಿದ್ದು, ಕಂದಾಯ ಆಯುಕ್ತರು KPTCL ಎ-ಕಡತ ಸಂ. KPTCL/DP/EA1/3/2025-DP ರ ಕಂಡಿಕೆ-19 ರಲ್ಲಿ ಈ ಕುರಿತು ಸಹಮತವನ್ನು ವ್ಯಕ್ತಪಡಿಸಿರುತ್ತಾರೆ.

ಅದರಂತೆ, ವ್ಯವಸ್ಥಾಪಕ ನಿರ್ದೇಶಕರು, ಕೆಪಿಟಿಸಿಎಲ್ ರವರ ಪ್ರಸ್ತಾವನೆಯನ್ವಯ ಕೆಳಕಂಡ ಆದೇಶವನ್ನು ಹೊರಡಿಸಲಾಗಿದೆ.

<u>ಸರ್ಕಾರಿ ಆದೇಶ ಸಂಖ್ಯೆ: ಎನರ್ಜಿ/695/ಇಇಬಿ/2025, ದಿನಾಂಕ: 11-12-2025</u>

ಪ್ರಸ್ತಾವನೆಯಲ್ಲಿ ವಿವರಿಸಿರುವಂತೆ, ಕೆಪಿಟಿಸಿಎಲ್ ರವರ ಪ್ರಸ್ತಾವನೆಯನ್ವಯ 2034-35ಕ್ಕೆ ದ್ವಿಗುಣಗೊಳ್ಳುವ ವಿದ್ಯುತ್ ಉತ್ಪಾದನೆಯನ್ನು ಸಮರ್ಪಕವಾಗಿ ರವಾನಿಸಲು ಕೆಪಿಟಿಸಿಎಲ್ ರವರು ಸ್ಥಾಪಿಸಲು ಉದ್ದೇಶಿಸುವ ಉಪಕೇಂದ್ರಗಳಿಗೆ ಈ ಕೆಳಕಂಡಂತೆ ಅಗತ್ಯವಿರುವ ಭೂಮಿಯನ್ನು ಕರ್ನಾಟಕ ಭೂಮಂಜೂರಾತಿ ನಿಯಮಗಳು 1969 ರಲ್ಲಿ ನೀಡಿರುವ ನಿರ್ದೇಶನಗಳಂತೆ ಶೀಘ್ರವಾಗಿ ಮಂಜೂರು ಮಾಡಿ ಕೆಪಿಟಿಸಿಎಲ್ ರವರಿಗೆ ಹಸ್ತಾಂತರಿಸಲು ಆದೇಶಿಸಿದೆ.

1) Air Insulated Station

ಕ್ರ. ಸಂ	ಉಪಕೇಂದ್ರದ ವೊಲ್ಟೇಜ್	ಉಪಕೇಂದ್ರದ ಸಾಮರ್ಥ್ಯ	ಅವಶ್ಯವಿರುವ ಭೂಮಿ (ಎಕರೆಗಳಲ್ಲಿ)
1	765 ಕೆವಿ	9000MVA (6X1500MVA Transformers) + 3 Nos of Reactors and Transmission Line Bays	180
2	400 ಕೆವಿ	5000MVA (10X500MVA Transformers) + 3 Nos of Reactors and Transmission Line Bays	100
3	220 ಕೆವಿ	1000MVA (5X200MVA Transformers) + Transmission Line Bays	15
4	132 ಕೆವಿ / 110 ಕೆವಿ / 66 ಕೆವಿ	500MVA + Capacitor Bank + Transmission Line Bay + 11kV Distribution Line Bays	5

2) Gas Insulated Station

ಕ್ರ. ಸಂ	ಉಪಕೇಂದ್ರದ ವೊಲ್ಟೇಜ್	ಉಪಕೇಂದ್ರದ ಸಾಮರ್ಥ್ಯ	ಅವಶ್ಯವಿರುವ ಭೂಮಿ (ಎಕರೆಗಳಲ್ಲಿ)
1	400 ಕೆವಿ	5000MVA (10X500MVA Transformers) + 3 Nos of Reactors and Transmission Line Bays	12
2	220 ಕೆವಿ	1000MVA (5X200MVA Transformers) + Transmission Line Bays	5
3	132 ಕೆವಿ / 110 ಕೆವಿ / 66 ಕೆವಿ	500MVA + Capacitor Bank + Transmission Line Bay + 11kV Distribution Line Bays	1

ಈ ಆದೇಶದನ್ವಯ, ಉಪಕೇಂದ್ರಕ್ಕೆ ಅವಶ್ಯವಿರುವ ಭೂಮಿಯ ಗುರುತಿಸುವಿಕೆ ಹಾಗೂ ಕಂದಾಯ ಇಲಾಖೆ ವತಿಯಿಂದ ಹಂಚಿಕೆ ಪಡೆಯುವ ಸಂಬಂಧ ಕೈಗೊಳ್ಳಬೇಕಾದ ಕ್ರಮಗಳ ಬಗ್ಗೆ ಅವಶ್ಯವಿದ್ದಲ್ಲಿ ನಿಗಮದ ಮಟ್ಟದಲ್ಲಿ ಆಂತರಿಕ ಆದೇಶ/ಸುತ್ತೋಲೆ ಹೊರಡಿಸುವುದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

(ಗೌರವ್ ಗುಪ್ತ)
ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ
ಇಂಧನ ಇಲಾಖೆ

(ರಾಜೇಂದರ್ ಕುಮಾರ್ ಕಟಾರಿಯಾ)
ಸರ್ಕಾರದ ಪ್ರಧಾನ ಕಾರ್ಯದರ್ಶಿ
ಕಂದಾಯ ಇಲಾಖೆ

PR-10

ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ:- ಶ್ರೀ ಧರಣಪ್ಪ, ವಕೀಲರು ಮತ್ತು ನೋಟರಿ, ನಾಗಮಂಗಲ ಕಂದಾಯ ತಾಲ್ಲೂಕು, ಮಂಡ್ಯ ಜಿಲ್ಲೆ ಇವರ ಹೆಸರನ್ನು ನೋಟರಿಗಳ ಪಟ್ಟಿಯಿಂದ ತೆಗೆಯುವ ಬಗ್ಗೆ.

ಓದಲಾಗಿದೆ:- (1) ಸರ್ಕಾರದ ಆದೇಶ ಸಂಖ್ಯೆ: ಲಾ 46 ಎಲ್‌ಸಿಎಲ್ 1999, ದಿನಾಂಕ : 19-03-1999.
(2) ಡಾ|| ಎಂ. ಡಿ. ನಿತಿನ್, S/o ಲೇಟ್ ಶ್ರೀ ಧರಣಪ್ಪ, ಸುಭಾಷ್ ನಗರ, ಮಂಡ್ಯ ಇವರು ಸಲ್ಲಿಸಿರುವ ದಿನಾಂಕ : 20-05-2024ರ ಪತ್ರ.

* * * * *

ಪ್ರಸ್ತಾವನೆ:-

ಮೇಲೆ ಓದಲಾದ ಕ್ರಮ ಸಂಖ್ಯೆ (1)ರ ದಿನಾಂಕ : 19-03-1999ರ ಆದೇಶದಲ್ಲಿ ಶ್ರೀ ಧರಣಪ್ಪ, ವಕೀಲರು ಇವರನ್ನು ನಾಗಮಂಗಲ ಕಂದಾಯ ತಾಲ್ಲೂಕು, ಮಂಡ್ಯ ಜಿಲ್ಲೆಗೆ ನೋಟರಿಯನ್ನಾಗಿ ನೇಮಿಸಲಾಗಿದೆ.

ಮೇಲೆ ಓದಲಾದ ಕ್ರಮ ಸಂಖ್ಯೆ: (2)ರ ಪತ್ರದಲ್ಲಿ ಶ್ರೀ ಧರಣಪ್ಪ, ವಕೀಲರು ಮತ್ತು ನೋಟರಿ ಇವರು ದಿನಾಂಕ : 20-04-2023ರಂದು ನಿಧನ ಹೊಂದಿದ್ದು, ಸದರಿಯವರ ಹೆಸರನ್ನು ರದ್ದುಪಡಿಸುವಂತೆ ಅವರ ಮಗ ಡಾ|| ಎಂ.ಡಿ.ನಿತಿನ್, ನಾಗಮಂಗಲ, ಮಂಡ್ಯ ಇವರು ಕೋರಿರುತ್ತಾರೆ.

ಸದರಿ ಪ್ರಸ್ತಾವನೆಯನ್ನು ಪರಿಶೀಲಿಸಿ, ಈ ಕೆಳಕಂಡಂತೆ ಆದೇಶಿಸಿದೆ.

ಸರ್ಕಾರದ ಆದೇಶ ಸಂಖ್ಯೆ: ಲಾ-ಎಲ್‌ಸಿಎಲ್/108/2024,
ಬೆಂಗಳೂರು, ದಿನಾಂಕ : 02-01-2026

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, ಶ್ರೀ ಧರಣಪ್ಪ, ವಕೀಲರು ಮತ್ತು ನೋಟರಿ, ನಾಗಮಂಗಲ ಕಂದಾಯ ತಾಲ್ಲೂಕು, ಮಂಡ್ಯ ಜಿಲ್ಲೆ ಇವರು ದಿನಾಂಕ : 20-04-2023 ರಂದು ನಿಧನ ಹೊಂದಿರುವುದರಿಂದ ಸದರಿಯವರ ಹೆಸರನ್ನು ನೋಟರಿ ರಿಜಿಸ್ಟರ್‌ನಿಂದ ಶಾಶ್ವತವಾಗಿ ತೆಗೆಯಲಾಗಿದೆ.

ಮುಂದುವರೆದು, ಸದರಿಯವರಿಗೆ ಈ ಹಿಂದೆ ಸರ್ಕಾರದಿಂದ ವಿತರಿಸಿದ ನವೀಕರಿಸಿದ ನೋಟರಿ ವೃತ್ತಿ ಪ್ರಮಾಣ ಪತ್ರ ಸಂಖ್ಯೆ: ಲಾ-ಎಲ್‌ಸಿಎಲ್/273/2021, ದಿನಾಂಕ : 28-11-2022ನ್ನು ರದ್ದುಪಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

(ಆದಿನಾರಾಯಣ)
ಸರ್ಕಾರದ ಅಧೀನ ಕಾರ್ಯದರ್ಶಿ,
ಕಾನೂನು, ನ್ಯಾಯ ಮತ್ತು
ಮಾನವ ಹಕ್ಕುಗಳ ಇಲಾಖೆ (ಆಡಳಿತ-2).

PR-11

ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ:- ಶ್ರೀ ಶ್ರೀಹರಿ ಮೋಹನ್‌ರಾವ್ ಪಾರಂಡೆ, ವಕೀಲರು ಮತ್ತು ನೋಟರಿ, ಬಾಗಲಕೋಟೆ ಕಂದಾಯ ತಾಲ್ಲೂಕು, ಬಾಗಲಕೋಟೆ ಜಿಲ್ಲೆ ಇವರ ಹೆಸರನ್ನು ನೋಟರಿಗಳ ಪಟ್ಟಿಯಿಂದ ತೆಗೆಯುವ ಬಗ್ಗೆ.

ಓದಲಾಗಿದೆ:- (1) ಮಾನ್ಯ ಶಾಸಕರು, ಬಾಗಲಕೋಟೆ ವಿಧಾನಸಭಾ ಕ್ಷೇತ್ರ ಹಾಗೂ ಅಧ್ಯಕ್ಷರು, ಬಾಗಲಕೋಟೆ ಪಟ್ಟಣ ಅಭಿವೃದ್ಧಿ ಪ್ರಾಧಿಕಾರ ಇವರ ಪತ್ರ ಸಂಖ್ಯೆ: 2589/MLA/BGL/25-26, ದಿನಾಂಕ : 29-09-2025.
(2) ಸರ್ಕಾರದ ಪತ್ರ ಸಂಖ್ಯೆ: ಲಾ-ಎಲ್‌ಸಿಎಲ್/285/2025, ದಿನಾಂಕ : 27-10-2025.
(3) ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ಬಾಗಲಕೋಟೆ ಜಿಲ್ಲೆ ಇವರ ಕಛೇರಿ ಪತ್ರ ಸಂಖ್ಯೆ: ಇಎಸ್‌ಟಿ/5978/2025, ದಿನಾಂಕ : 03-11-2025.

* * * * *

ಪ್ರಸ್ತಾವನೆ:-

ಮೇಲೆ ಓದಲಾದ ಕ್ರಮ ಸಂಖ್ಯೆ (1)ರ ದಿನಾಂಕ : 29-09-2025ರ ಪತ್ರದಲ್ಲಿ ಬಾಗಲಕೋಟೆ ಜಿಲ್ಲೆಯ ಬಾಗಲಕೋಟೆ ಕಂದಾಯ ತಾಲ್ಲೂಕಿನಲ್ಲಿ ನೋಟರಿಯಾಗಿ ಕಾರ್ಯನಿರ್ವಹಿಸುತ್ತಿದ್ದ ಶ್ರೀ ಎಸ್. ಎಂ. ಪರಾಂಡೆ, ವಕೀಲರು ಇವರು ದಿನಾಂಕ : 08-08-2025ರಂದು ಮೃತವಾಗಿದ್ದು, ಸದರಿ ನೋಟರಿ ಹುದ್ದೆ ಖಾಲಿ ಇರುವ ಕಾರಣ ಕೇಂದ್ರ ಸರ್ಕಾರದ ಕಾನೂನು ಮತ್ತು ನ್ಯಾಯ ಸಚಿವಾಲಯದ ತಿದ್ದುಪಡಿ ಅಧಿಸೂಚನೆ ಸಂಖ್ಯೆ: ಜಿಎಸ್‌ಆರ್ 429 ಇ ರನ್ವಯ ನಿಯಮ 7 (ಎ) ಉಪನಿಯಮ 2ರ ಅಡಿಯಲ್ಲಿ ಶ್ರೀ ಸುನೀಲ ಪರಶುರಾಮ ಕಿರಸೂರ, ವಕೀಲರು ಇವರನ್ನು ನೋಟರಿ ಹುದ್ದೆಗೆ ನೇಮಕ ಮಾಡುವಂತೆ ಕೋರಿರುತ್ತಾರೆ.

ಮೇಲೆ ಓದಲಾದ ಕ್ರಮ ಸಂಖ್ಯೆ: (2)ರ ದಿನಾಂಕ : 27-10-2025ರ ಪತ್ರದಲ್ಲಿ ಶ್ರೀ ಎಸ್. ಎಂ. ಪಾರಂಡೆ, ವಕೀಲರು ಮತ್ತು ನೋಟರಿ ಇವರು ನಿಧನ ಹೊಂದಿರುವುದರಿಂದ, ಈ ಹಿಂದೆ ಸರ್ಕಾರದಿಂದ ವಿತರಿಸಿದ ನವೀಕರಿಸಿದ ನೋಟರಿ ವೃತ್ತಿ ಪ್ರಮಾಣ ಪತ್ರದ ಮೂಲ ಪ್ರತಿಯನ್ನು ಮೃತಪಟ್ಟಿರುವ ನೋಟರಿಯವರ ಕುಟುಂಬದಿಂದ ಪಡೆದು ಸರ್ಕಾರಕ್ಕೆ ಕಳುಹಿಸಿ ಕೊಡುವಂತೆ ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ಬಾಗಲಕೋಟೆ ಜಿಲ್ಲೆ ಇವರನ್ನು ಕೋರಲಾಗಿತ್ತು.

ಮೇಲೆ ಓದಲಾದ ಕ್ರಮ ಸಂಖ್ಯೆ: (3)ರ ದಿನಾಂಕ : 03-11-2025ರ ಪತ್ರದಲ್ಲಿ ಶ್ರೀ ಎಸ್. ಎಂ. ಪಾರಂಡೆ, ವಕೀಲರು ಮತ್ತು ನೋಟರಿ ಇವರು ದಿನಾಂಕ : 08-08-2025 ರಂದು ನಿಧನ ಹೊಂದಿರುವುದಾಗಿ ವರದಿ ಮಾಡುತ್ತಾ, ಈ ಹಿಂದೆ ಸದರಿಯವರಿಗೆ ಸರ್ಕಾರದಿಂದ ದಿನಾಂಕ : 01-01-2022ರಂದು ವಿತರಿಸಿದ ನೋಟರಿ ವೃತ್ತಿ ಪ್ರಮಾಣ ಪತ್ರ ಸಂಖ್ಯೆ: ಲಾ-ಎಲ್‌ಸಿಎಲ್/69/2021ರ ಮೂಲ ಪ್ರತಿಯನ್ನು ಸಲ್ಲಿಸಿ, ಮುಂದಿನ ಕ್ರಮವಹಿಸುವಂತೆ ಕೋರಿರುತ್ತಾರೆ.

ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ಬಾಗಲಕೋಟೆ ಜಿಲ್ಲೆ ಇವರು ಸಲ್ಲಿಸಿರುವ ಪತ್ರ ಮತ್ತು ದಾಖಲೆಯನ್ನು ಪರಿಶೀಲಿಸಿ, ಈ ಕೆಳಕಂಡಂತೆ ಆದೇಶಿಸಿದೆ.

ಸರ್ಕಾರದ ಆದೇಶ ಸಂಖ್ಯೆ: ಲಾ-ಎಲ್‌ಸಿಎಲ್/285/2025,
ಬೆಂಗಳೂರು, ದಿನಾಂಕ : 06-01-2026

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, **ಶ್ರೀ ಶ್ರೀಹರಿ ಮೋಹನ್‌ರಾವ್ ಪಾರಂಡೆ,** ವಕೀಲರು ಮತ್ತು ನೋಟರಿ, ಬಾಗಲಕೋಟೆ ಕಂದಾಯ ತಾಲ್ಲೂಕು, ಬಾಗಲಕೋಟೆ ಜಿಲ್ಲೆ

ಇವರು ದಿನಾಂಕ : 08-08-2025 ರಂದು ನಿಧನ ಹೊಂದಿರುವುದರಿಂದ ಸದರಿಯವರ ಹೆಸರನ್ನು ನೋಟರಿ ರಿಜಿಸ್ಟರ್‌ನಿಂದ ಶಾಶ್ವತವಾಗಿ ತೆಗೆಯಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

(ಆದಿನಾರಾಯಣ)
ಸರ್ಕಾರದ ಅಧೀನ ಕಾರ್ಯದರ್ಶಿ,
ಕಾನೂನು, ನ್ಯಾಯ ಮತ್ತು
ಮಾನವ ಹಕ್ಕುಗಳ ಇಲಾಖೆ (ಆಡಳಿತ-2).

PR-12

ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ:- ಬೆಳಗಾವಿ ಜಿಲ್ಲೆಯ ಹುಕ್ಕೇರಿ ಕಂದಾಯ ತಾಲ್ಲೂಕಿಗೆ ಹೆಚ್ಚುವರಿಯಾಗಿ ಒಂದು (01) ನೋಟರಿ ಹುದ್ದೆಯನ್ನು ಸೃಜಿಸುವ ಬಗ್ಗೆ.

ಓದಲಾಗಿದೆ:

1. ಕಡತ ಸಂಖ್ಯೆ: ಲಾ-ಎಲ್‌ಸಿಎಲ್/318/2025.
2. ಸರ್ಕಾರದ ಪತ್ರ ಸಂಖ್ಯೆ: ಲಾ-ಎಲ್‌ಸಿಎಲ್/318/2025, ದಿನಾಂಕ : 04-12-2025.
3. ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ಬೆಳಗಾವಿ ಜಿಲ್ಲೆ ರವರ ಕಛೇರಿ ಪತ್ರ ಸಂಖ್ಯೆ: RK/20348/2025, ದಿನಾಂಕ : 11-12-2025.

ಪ್ರಸ್ತಾವನೆ:

ಮೇಲೆ ಓದಲಾದ ಕ್ರಮ ಸಂಖ್ಯೆ: (1)ರ ಕಡತದಲ್ಲಿ ಬೆಳಗಾವಿ ಜಿಲ್ಲೆಯ ಹುಕ್ಕೇರಿ ಕಂದಾಯ ತಾಲ್ಲೂಕಿಗೆ ಹೆಚ್ಚುವರಿಯಾಗಿ ಒಂದು ನೋಟರಿ ಹುದ್ದೆಯನ್ನು ಸೃಜಿಸಲು ಪ್ರಸ್ತಾಪಿಸಿಲಾಗಿದೆ.

ಮೇಲೆ ಓದಲಾದ ಕ್ರಮ ಸಂಖ್ಯೆ: (2)ರ ಪತ್ರದಲ್ಲಿ ಬೆಳಗಾವಿ ಜಿಲ್ಲೆಯ ಹುಕ್ಕೇರಿ ಕಂದಾಯ ತಾಲ್ಲೂಕಿಗೆ ಹೆಚ್ಚುವರಿ ನೋಟರಿ ಹುದ್ದೆ ಸೃಜಿಸುವ ಬಗ್ಗೆ ಅಭಿಪ್ರಾಯವನ್ನು ತಿಳಿಸುವಂತೆ ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ಬೆಳಗಾವಿ ಜಿಲ್ಲೆ ಇವರನ್ನು ಕೋರಲಾಗಿತ್ತು.

ಮೇಲೆ ಓದಲಾದ ಕ್ರಮ ಸಂಖ್ಯೆ (3) ರ ದಿನಾಂಕ : 11-12-2025 ಪತ್ರದಲ್ಲಿ ಬೆಳಗಾವಿ ಜಿಲ್ಲೆಯ ಹುಕ್ಕೇರಿ ಕಂದಾಯ ತಾಲ್ಲೂಕಿಗೆ ಹೆಚ್ಚುವರಿ ನೋಟರಿ ಹುದ್ದೆ ಸೃಜಿಸುವ ಅವಶ್ಯಕತೆ ಇದೆ ಎಂದು ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ಬೆಳಗಾವಿ ಜಿಲ್ಲೆ ಇವರು ಅಭಿಪ್ರಾಯ ತಿಳಿಸಿರುತ್ತಾರೆ.

ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ಬೆಳಗಾವಿ ಜಿಲ್ಲೆ ಇವರ ಅಭಿಪ್ರಾಯದನ್ವಯ ನೋಟರಿಗಳ ನಿಯಮಗಳು, 1956ರ ನಿಯಮ 8(4A) ರನ್ವಯ ಹೆಚ್ಚುವರಿ ನೋಟರಿ ಹುದ್ದೆಯನ್ನು ಸೃಜಿಸುವ ಪ್ರಸ್ತಾವನೆಯನ್ನು ಪರಿಶೀಲಿಸಿದ ಸರ್ಕಾರವು ಈ ಕೆಳಕಂಡಂತೆ ಆದೇಶಿಸಿದೆ.

ಸರ್ಕಾರದ ಆದೇಶ ಸಂಖ್ಯೆ: ಲಾ - ಎಲ್‌ಸಿಎಲ್/318/2025,
ಬೆಂಗಳೂರು, ದಿನಾಂಕ : 16-12-2025

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, ಬೆಳಗಾವಿ ಜಿಲ್ಲೆಯ ಹುಕ್ಕೇರಿ ಕಂದಾಯ ತಾಲ್ಲೂಕಿಗೆ ಹೆಚ್ಚುವರಿಯಾಗಿ ಒಂದು (01) ನೋಟರಿ ಹುದ್ದೆಯನ್ನು ಸೃಜಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

(ಹೆಚ್. ವನಿತ)
ಸರ್ಕಾರದ ಉಪ ಕಾರ್ಯದರ್ಶಿ,
ಕಾನೂನು, ನ್ಯಾಯ ಮತ್ತು
ಮಾನವ ಹಕ್ಕುಗಳ ಇಲಾಖೆ (ಆಡಳಿತ-2).

PR-13

ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: ಡಿಜಿಟಲ್ ಇ-ಸ್ಟಾಂಪ್ ಸೇವೆಯನ್ನು ಸಾರ್ವಜನಿಕರು EDCS ಸಂಸ್ಥೆಯ ಸೇವಾ ಕೇಂದ್ರಗಳ ಮೂಲಕ ಪಡೆಯುವ ಸಂದರ್ಭದಲ್ಲಿ ಸೇವಾ ಶುಲ್ಕವನ್ನು ವಿಧಿಸುವ ಕುರಿತು.

ಓದಲಾಗಿದೆ: 1) ಸರ್ಕಾರದ ಅಧಿಸೂಚನೆ ಸಂಖ್ಯೆ: ಕಂಇ/36/ಎಂಎನ್ಎಂಯು/2025 ದಿನಾಂಕ:07-08-2025.

2) ನೋಂದಣಿ ಮಹಾಪರಿವೀಕ್ಷಕರು ಹಾಗೂ ಮುದ್ರಾಂಕಗಳ ಆಯುಕ್ತರವರ ಇ-ಕಡತ ಸಂಖ್ಯೆ: IGR CS/ENF/93/2025P(1) (2002965).

* * * * *

ಪ್ರಸ್ತಾವನೆ:

ಮೇಲೆ ಓದಲಾದ ಕ್ರಮ ಸಂಖ್ಯೆ (1) ರ ಅಧಿಸೂಚನೆಯಲ್ಲಿ, ನೋಂದಣಿ ಮತ್ತು ಮುದ್ರಾಂಕ ಇಲಾಖೆಯ ಕಾವೇರಿ-2 ತಂತ್ರಾಂಶದಲ್ಲಿ ನಾಗರೀಕರು ಯಾವುದೇ ಮಧ್ಯವರ್ತಿಗಳ ನೆರವಿಲ್ಲದೆ, ಮುದ್ರಾಂಕ ಶುಲ್ಕದಲ್ಲಿ ವಂಚನೆ ಮತ್ತು ಭದ್ರತಾ ಕೊರತೆಯನ್ನು ಸಂಪೂರ್ಣವಾಗಿ ತೆಗೆದುಹಾಕಲು ನಕಲಿ ಸಹಿ, ನಕಲಿ ಪ್ರತಿ ಮತ್ತು ತಪ್ಪು ವರ್ಗೀಕರಣದಿಂದ ಸರ್ಕಾರಕ್ಕೆ ಸೇರುವ ಮುದ್ರಾಂಕ ಶುಲ್ಕವನ್ನು ತಪ್ಪಿಸುವ ಘಟನೆಗಳಿಂದ ಸರ್ಕಾರಕ್ಕೆ ಆದಾಯ ನಷ್ಟವನ್ನು ಉಂಟು ಮಾಡುತ್ತಿರುವುದನ್ನು ಗಮನಿಸಿ, ಕರ್ನಾಟಕವು ಸಂಪೂರ್ಣ ಡಿಜಿಟಲ್ ನೋಂದಣಿ ವ್ಯವಸ್ಥೆಯತ್ತ ಸಾಗುತ್ತಿರುವುದರಿಂದ, ಮುದ್ರಾಂಕ ಶುಲ್ಕದಲ್ಲಿ ವಂಚನೆ ಮತ್ತು ಭದ್ರತಾ ಕೊರತೆಯನ್ನು ಸಂಪೂರ್ಣ ತೊಡೆದು ಹಾಕುವ ನಿಟ್ಟಿನಲ್ಲಿ ಕರ್ನಾಟಕ ಮುದ್ರಾಂಕ (ಡಿಜಿಟಲ್ ಇ-ಸ್ಟಾಂಪ್) ನಿಯಮಗಳು 2025 ನ್ನು ರಚಿಸಲಾಗಿರುತ್ತದೆ.

ಕರ್ನಾಟಕ ಮುದ್ರಾಂಕ (ಡಿಜಿಟಲ್ ಇ-ಸ್ಟಾಂಪ್) ನಿಯಮಗಳು 2025 ನ್ನು ರಚಿಸಿ, ಜಾರಿಗೆ ತಂದಿರುವುದರಿಂದ ನೋಂದಣಿ ಮತ್ತು ಮುದ್ರಾಂಕ ಇಲಾಖೆಯ ಕಾವೇರಿ-2 ತಂತ್ರಾಂಶದಿಂದ ನಾಗರೀಕರು ಮನೆಯಿಂದಲೇ ಆನ್‌ಲೈನ್ ಮೂಲಕ ಇ-ಸ್ಟಾಂಪ್ ಅನ್ನು ಪಡೆಯಬಹುದಾಗಿರುತ್ತದೆ.

ಮೇಲೆ ಓದಲಾದ ಕ್ರಮ ಸಂಖ್ಯೆ (2)ರ ಇ-ಕಡತದಲ್ಲಿ, ಡಿಜಿಟಲ್ ಇ-ಸ್ಟಾಂಪ್ ಪ್ರಮಾಣ ಪತ್ರಗಳನ್ನು ಸಾರ್ವಜನಿಕರು ಕರ್ನಾಟಕ ಒನ್, ಬೆಂಗಳೂರು ಒನ್, ಗ್ರಾಮ ಒನ್ ಮತ್ತು ಜನಸೇವಕ ಸೇವಾ ಕೇಂದ್ರಗಳ ಮೂಲಕ ಪಡೆಯುವ ಸಂದರ್ಭದಲ್ಲಿ Electronically Delivery of Citizen Services (EDCS) ರವರು ಈ ಕೆಳಕಂಡಂತೆ ಸೇವಾ ಶುಲ್ಕವನ್ನು ಪಡೆಯಲು ಅನುಮೋದನೆ ಕೋರಿ ನೋಂದಣಿ ಮಹಾಪರಿವೀಕ್ಷಕರು ಹಾಗೂ ಮುದ್ರಾಂಕಗಳ ಆಯುಕ್ತರವರು ಪ್ರಸ್ತಾವನೆಯನ್ನು ಸಲ್ಲಿಸಿರುತ್ತಾರೆ.

Sl. No	Details	Service Charges to EDCS (Rs)	Minimum and Maximum Service charges
1	Sale of Digital e-Stamp, if it involves only entry of Party details and does not require any property data fetching from sources like Bhoomi, e-Swathu, e-Aasthi, etc.	**Service of Charge of Rs.20 for first person; and Rs.5 for every additional person.**	**Minimum Service charge of Rs.20. And Maximum service charge of Rs.50**
2	Sale of Digital e-Stamp, if it involves entry of Party details and also requires property data fetching from sources like Bhoomi, e-Swathu, e-Aasthi, etc.	**a) Service of Charge of Rs.20 for first person; and Rs.5 for every additional person. AND b) Service of Charge of Rs.5 for first property; and Rs.5 for every additional property.**	**Minimum Service charge of Rs.25. And Maximum service charge of Rs.100**

R.N.I. No. KARBIL/2001/47147 POSTAL REGN. No. RNP/KA/BGS/2202/2017-19
Licensed to post without prepayment WPP No. 297

ನೋಂದಣಿ ಮಹಾಪರಿವೀಕ್ಷಕರು ಮತ್ತು ಮುದ್ರಾಂಕಗಳ ಆಯುಕ್ತರ ಪ್ರಸ್ತಾವನೆಯನ್ನು ಕೂಲಂಕಷವಾಗಿ ಪರಿಶೀಲಿಸಿ, ಈ ಕೆಳಕಂಡಂತೆ ಆದೇಶಿಸಿದೆ.

ಸರ್ಕಾರದ ಆದೇಶ ಸಂಖ್ಯೆ: ಕಂಇ/61/ಎಂಎನ್ಎಂಯು/2025
ಬೆಂಗಳೂರು, ದಿನಾಂಕ:06-01-2026

ಮೇಲೆ ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, ನೋಂದಣಿ ಮತ್ತು ಮುದ್ರಾಂಕ ಇಲಾಖೆಯ ಕಾವೇರಿ-2 ತಂತ್ರಾಂಶದಲ್ಲಿ ಡಿಜಿಟಲ್ ಇ-ಸ್ಟಾಂಪ್ ಪ್ರಮಾಣ ಪತ್ರಗಳನ್ನು ಸಾರ್ವಜನಿಕರು ಕರ್ನಾಟಕ ಒನ್, ಬೆಂಗಳೂರು ಒನ್, ಗ್ರಾಮ ಒನ್ ಮತ್ತು ಜನಸೇವಕ ಸೇವಾ ಕೇಂದ್ರಗಳ ಮೂಲಕ ಪಡೆಯುವ ಸಂದರ್ಭದಲ್ಲಿ Electronically Delivery of Citizen Services (EDCS) ರವರು ಈ ಕೆಳಕಂಡಂತೆ ಸೇವಾ ಶುಲ್ಕವನ್ನು ಪಡೆಯಲು ಆದೇಶಿಸಿದೆ.

Sl. No	Details	Service Charges to EDCS (Rs)	Minimum and Maximum Service charges
1	Sale of Digital e-Stamp, if it involves only entry of Party details and does not require any property data fetching from sources like Bhoomi, e-Swathu, e-Aasthi, etc.	**Service of Charge of Rs.20 for first person; and Rs.5 for every additional person.**	**Minimum Service charge of Rs.20. And Maximum service charge of Rs.50**
2	Sale of Digital e-Stamp, if it involves entry of Party details and also requires property data fetching from sources like Bhoomi, e-Swathu, e-Aasthi, etc.	**a) Service of Charge of Rs.20 for first person; and Rs.5 for every additional person. AND b) Service of Charge of Rs.5 for first property; and Rs.5 for every additional property.**	**Minimum Service charge of Rs.25. And Maximum service charge of Rs.100**

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ,

(ಪದ್ಮ.ವಿ)
ಸರ್ಕಾರದ ಉಪ ಕಾರ್ಯದರ್ಶಿ
ಕಂದಾಯ ಇಲಾಖೆ
(ವಿ.ನಿ., ನೋಂದಣಿ ಮತ್ತು ಮುದ್ರಾಂಕ)

PR-14

ಮುದ್ರಕರು ಹಾಗೂ ಪ್ರಕಾಶಕರು:– ಸಂಕಲನಾಧಿಕಾರಿಗಳು, ಕರ್ನಾಟಕ ರಾಜ್ಯಪತ್ರ, ಸರ್ಕಾರಿ ಕೇಂದ್ರ ಮುದ್ರಣಾಲಯ, ಬೆಂಗಳೂರು

THAMMAIAH